# ಇಕ್ಕೊ ನವನೀತ ಚೋರ ಸಿಕ್ಕಿದನಮ್ಮ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 61.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 53.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. Note: Lyrics given here are as per Ref. 1. The wordings in Ref. 2 are same as in Ref. 1.
5. Note: Singer has followed these lyrics.

ರಾಗ: ನವರೋಜು ತಾಳ: ಏಕ

ಇಕ್ಕೊ ನವನೀತ ಚೋರ ಸಿಕ್ಕಿದನಮ್ಮ , ಹೆ-
ಮ್ಮಕ್ಕಳೆಲ್ಲರು ಕೂಡಿ ನಮ್ಮಕ್ಕರ ತೀರಿಸಿಕೊಂಬ || ಪ ||

ಅಂದು ಮೊದಲಾಗಿ ನಮ್ಮ ಮಂದಿರ ಗಳಲ್ಲಿ ಪೊಕ್ಕು
ತಿಂದ ಮೀಸಲ ಬೆಣ್ಣೆ
ದಂಥೆ ಮಾಡಿ ಪೋದನಕ್ಕ, ಬಹು
ದಂಥೆ ಮಾಡಿ ಪೋದನಕ್ಕ || 1 ||

ಗಾಢದಿಂದಲಿವನ ಹೆಡೆಮುಡಿಯ ಬಿಗಿದು ಕಟ್ಟಿ
ಒಡಿಹೋದರೆ ಸಿಕ್ಕ, ಕಿಡಿ-
ಗೇಡಿ ರಂಗನ ಬಿಡಬೇಡಿ , ಕಿಡಿ
ಗೇಡಿ ಕೃಷ್ಣನ ಬಿಡಬೇಡಿ || 2 ||

ಯಾರು ಇಲ್ಲದ ವೇಳೆ ದಾರಿ ನೋಡುತ್ತಲಿವ
ಸೂರೆ ಮಾಡುವ ಹಾಲು ಮೊಸರು

ಚೋರ ರಂಗನ ಬಿಡಬೇಡಿರೆ
ಧೀರ ಕೃಷ್ಣನ ಬಿಡಬೇಡಿರೆ || 3 ||

ಗಂಡನಿಲ್ಲದ ವೇಳೆ ನೋಡಿ, ಭಂಡು ಮಾಡಿ ಸೀರೆ ಕದ್ದು-
ಕೊಂಡು ಹಾಲು ಕೆನೆಯ ಕದ್ದ
ಲಂಡ ರಂಗನ ಬಿಡಬೇಡಿರೆ
ಪುಂಡ ಕೃಷ್ಣನ ಬಿಡಬೇಡಿರೆ || 4 ||

ಕಾದುಕೊಂಡಿವ ಬಾಹೊ
ಹಾದಿಯ ನೋಡಿ ನಾ ದಣಿದೆ
ಆದುದೆಮ್ಮಯ ಕಾಮ ಸಾಧಿಸಿಕೊಂಬ
ಕ್ರೋಧ ಸಾಧಿಸಿಕೊಂಬ || 5 ||

ಒರಳಿಲಿ ಕಟ್ಟಿಸಿಕೊಂಡು, ಒರಳ ಕೊಂಡೋಡುವನಿಂಥ
ದುರುಳ ಕೃಷ್ಣನ ಬಿಡಬೇಡಿ
ಮರುಳ ಮಾಡಿ ಹೋದನಮ್ಮ
ಬಹು ಮೋಸ ಮಾಡಿ ಹೋದನಮ್ಮ || 6 ||

ಇಂದಿನ ದಿನ ಸುದಿನ
ಮಂದರಧರ ದೊರೆತ ಕಾರಣ
ತಂದೆ ಪುರಂದರ ವಿಠಲನ್ನ ಅಪ್ಪಿಕೊಂಬ
ಸಂತೋಷದಿಂದ ಅಪ್ಪಿಕೊಂಬ || 7 ||

**Classification:** Keertane
**Ankita:** tande purandara vittala
**Location:** NA
**Category:** Krishna Stuti
**Sub-Category:** benne, kalla, makkalu, mane, ranga, Krishna, dAri, pati, halu, mosa, dina, santosha,
**Pravachana:** NA
**Explanation:** NA